<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u> PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 19.07.2025

<u>ಪಾಟೀ ಸವಾಲುಃ **1, 8** ರಿಂದ **12** ಮತ್ತು **14** ನೇ ಪ್ರತಿವಾದಿ ಪರ ವಕೀಲರಿಂದಃ</u>

ನನಗೆ ಈ ದಾವೆಯ ಬಗ್ಗೆ ಮಾಹಿತಿ ಇರುತ್ತದೆ. ನಿಪಿ.1 ರಲ್ಲಿರುವ ವಂಶವೃಕ್ಷವನ್ನು ನನ್ನ ತಂದೆಯವರು ಹೇಳಿ ಬರೆಸಿರುತ್ತಾರೆ. ನೀವು ತಹಶೀಲ್ದಾರ್ ಕಚೇರಿಯಿಂದ ವಂಶವೃಕ್ಷವನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ವಾದಿ ಹಾಗೂ ಪ್ರತಿವಾದಿಯರು ಚನ್ನೇನಹಳ್ಳಿ ಗ್ರಾಮದಲ್ಲಿ ಒಂದೇ ಮನೆಯಲ್ಲ ವಾಸವಾಗಿರುವುದಿಲ್ಲ ಹಾಗೂ ಅವರಗುಳು ಬೇರೆ ಬೇರೆ ಮನೆಯಲ್ಲಿ ಬೇರೆ ಬೇರೆ ವಿಳಾಸದಲ್ಲಿ ವಾಸವಾಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನನ್ನ ತಾತನಾದ ಚನ್ನಯ್ಯರವರು ತೀರಿಕೊಂಡು ಸುಮಾರು 15 ವರ್ಷಗಳು ಆಗಿರಬಹುದು, ಆದರೆ ನಿಖರವಾದ ದಿನಾಂಕ ನೆನಪಿರುವುದಿಲ್ಲ. ಸದರಿ ಚನ್ನಯ್ಯರವರು ದಿನಾಂಕ 04.01.1999 ರಲ್ಲಿ ತೀರಿಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 12.11.1983 ರ ವಿಭಾಗ ಪತ್ರದಂತೆ ನನ್ನ ತಂದೆಗೆ ಡಿ ಷೆಡ್ಯೂಲ್ ಸ್ವತ್ತು ಅವರ ಭಾಗಕ್ಕೆ ಬಂದಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ 12.11.1983 ರ ವಿಭಾಗ ಪತ್ರದಂತೆ ಎ ಷೆಡ್ಯೂಲ್ ಸ್ವತ್ತು ನಿಮ್ಮ ತಾತನಾದ ಚನ್ನಯ್ಯನವರ ಭಾಗಕ್ಕೆ ಬಂದಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಎ ಷೆಡ್ಯೂಲ್ ಸ್ವತ್ತು ಯಾವುದೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರವನ್ನು ನೀವು ಓದಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಎ ಷೆಡ್ಯೂಲ್ ಸ್ವತ್ತು ಚನ್ನಯ್ಯ ಹಾಗೂ ಪುಟ್ಟಮಾದಮ್ಮ ರವರ ಇಬ್ಬರ ಭಾಗಕ್ಕೆ ಬಂದಿರುವ ಸ್ವತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ

12.11.1983 ರ ವಿಭಾಗ ಪತ್ರದಂತೆ ಚನ್ನಯ್ಯ ಹಾಗೂ ಪುಟ್ಟಮಾದಮ್ಮರವರಿಗೆ ಎಷ್ಟು ಸ್ವತ್ತುಗಳು ಬಂದಿರುತ್ತವೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 12.11.1983 ರ ವಿಭಾಗ ಪತ್ರದಲ್ಲಿ ಸದರಿ ಚನ್ನಯ್ಯ ಹಾಗೂ ಪುಟ್ಟಮಾದಮ್ಮರವರುಗಳಿಗೆ ಬಂದಿರುವ ಸ್ವತ್ತಿಗೆ ಸಂಬಂಧಿಸಿದಂತೆ ಅವರುಗಳು ಮನೆ ಕಟ್ಟಲು, ಬೇರೆ ಸಾಲ ತೀರಿಸಲು ಹಾಗೂ ವಿವಾಹ ಮಾಡಲು ಅವರಿಗೆ ಬಂದ ಸ್ವತ್ತುಗಳನ್ನು ವಿಲೇವಾರಿ ಮಾಡಿಕೊಳ್ಳಬಹುದೆಂದು ಬರೆದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ನಿಪಿ.3 ಮತ್ತು 4 ದಾಖಲೆಯನ್ನು ತೋರಿಸಿ ನಿಮ್ಮ ತಾತನವರು ತೀರಿಕೊಂಡ ನಂತರ ನಿಮ್ಮ ಅಜ್ಜಿರವರ ಹೆಸರಿಗೆ ಪಹಣಿ ಪತ್ರಿಕೆ ಬದಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಿಪಿ.3 ಮತ್ತು 4 ಅನ್ನು ನೋಡಿ ಹೌದು ಎಂದು ನುಡಿಯುತ್ತಾರೆ.

ನಿಪಿ.3 ಮತ್ತು 4 ರಲ್ಲಿರುವ ಆಸ್ತಿಯನ್ನು ನನ್ನ ಅಜ್ಜಿಯಾದ ಪುಟ್ಟಮಾದಮ್ಮರವರು ಯಾರಿಗೂ ಪರಭಾರೆ ಮಾಡಿರುವುದಿಲ್ಲ ಎಂದರೆ ಸರಿ. ಈಗಲೂ ಸದರಿ ಆಸ್ತಿಯು ನನ್ನ ಅಜ್ಜಿಯ ಹೆಸರಿನಲ್ಲಿಯೇ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಪುಟ್ಟಮಾದಮ್ಮರವರೇ ಸ್ವಾಧೀನದಲ್ಲಿ ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಜಂಟಿ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ನಾವು ಜಂಟಿ ಸ್ವಾಧೀನದಲ್ಲಿ ಇರುವುದಕ್ಕೆ ನಾನು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

ನಿಮ್ಮ ತಾತ ವಿಲ್ ಮಾಡಿರುವುದಕ್ಕೆ ಸಂಬಂಧಿಸಿದಂತೆ ನೀವೇನಾದರೂ ವಿಲ್ ಅನ್ನು ನೋಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಿಲ್ ಬಗ್ಗೆ ನಿಮಗೆ ಮಾಹಿತಿ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ವಿಲ್ ಅನ್ನು ನೀವು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ವಿಲ್ ಬಗ್ಗೆ ನನ್ನ ತಂದೆಯವರು ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ವಿಲ್ ಮಾಡುವ ಸಂದರ್ಭದಲ್ಲಿ ನಿಮ್ಮ ತಾತನವರಿಗೆ ಆರೋಗ್ಯದ ಸಮಸ್ಯೆ ಇರುವ ಬಗ್ಗೆ, ಅವರು ಒಬ್ಬರೇ ಓಡಾಡಲು ಸಾಧ್ಯ ಆಗುತ್ತಿರಲಿಲ್ಲ ಎನ್ನುವ ಬಗ್ಗೆ ಹಾಗೂ ಮಾನಸಿಕ ಸ್ಥಿತಿ ಸರಿಯಾಗಿ ಇರಲಿಲ್ಲ ಎನ್ನುವ ಬಗ್ಗೆ ದಾಖಲೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

1977 ರಲ್ಲಿ ಈಗಾಗಲೇ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ನನ್ನ ತಾತನವರು ಯಾವುದೇ ಮರಣ ಶಾಸನವನ್ನು ಬರೆದಿರುವುದಿಲ್ಲ ಎನ್ನುವುದು ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಹಾಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ **13** ನೇ ಪ್ರತಿವಾದಿ ಪರ ವಕೀಲರಿಂದ

13 ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಆಲಿಸಿ ಅನುಮತಿ ನೀಡಲಾಯಿತು.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**